ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಹೆಚ್ಚುವರಿ ಸ್ಥಳಾವಕಾಶ ನಿರ್ಮಾಣಕ್ಕಾಗಿ ಸಮಾನಾಂತರ ಆರ್ಥಿಕ ಅನುದಾನ ಸಹಾಯ ನೀಡುವ ಬಗ್ಗೆ ಅನುದಾನ ಸಂಹಿತೆ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಇದುವರೆವಿಗೂ ಅಂತಹ ಪ್ರಸ್ತಾವನೆ ಬಂದಿರುವುದಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು (ಉ) ಪ್ರಶ್ನೆಗೆ ಉತ್ತರವಾಗಿ ಇದುವರೆಗೂ ಅಂಥ ಪ್ರಸ್ತಾವನೆ ಬಂದಿರುವುದಿಲ್ಲವೆಂದು ಹೇಳಿದ್ದಾರೆ. ಹಿಂದೆ ಶಿಕ್ಷಣ ಮಂತ್ರಿಗಳು ಯಾರ್ಯಾರಿದ್ದರು ಅವರೆಲ್ಲರಿಗೂ ನಾನು ಅರ್ಜಿಯನ್ನು ಕೊಟ್ಟಿದ್ದೇನೆ. ಈ ಮಂತ್ರಿಗಳಿಗೆ ಮಾತ್ರ ಕೊಟ್ಟಿರಲಿಲ್ಲ. ಆ ಒಂದು ಅಪ್ಲಿಕೇಷನ್ ಏನಿದೆ ಅದು ಶಾಲೆಯ ಕಡೆಯಿಂದ ಇದುವರೆಗೂ ಬರುತ್ತಿದೆ. ಅದನ್ನು ಪರಿಶೀಲನೆ ಮಾಡಿ ಸರಿಯಾದ ಉತ್ತರವನ್ನು ಕೊಡಲಿಲ್ಲ. ಈ ಮಂತ್ರಿಗಳು ಅದರ ಬಗ್ಗೆ ತೀವ್ರ ಗಮನ ಹರಿಸಬೇಕು. ಒಳ್ಳೆಯ ಶಿಕ್ಷಣ ಸಂಸ್ಥೆಗಳು ಖಾಸಗಿಯವರಾದರೂ ಕೂಡ ಚೆನ್ನಾಗಿ ಕೆಲಸ ಮಾಡುತ್ತಿವೆ. ಅವರಿಗೂ ನಾವು ಪ್ರೋತ್ಸಾಹ ಕೊಡುವುದಿಲ್ಲವೆಂದರೆ ಹೇಗೆ? ಸರ್ಕಾರದಿಂದ ಆಗುತ್ತಿರತಕ್ಕ ಶಿಕ್ಷಣ ಸಂಸ್ಥೆಗಳು ಸರಿಯಾಗಿ ನಡೆಯುತ್ತಿಲ್ಲ. ಅವರಿಗೂ ನೀವು ಕೊಡದಿದ್ದರೆ ಮಕ್ಕಳಿಗೆ ಯಾವ ರೀತಿ ವಿದ್ಯಾಭ್ಯಾಸ ಕೊಡುವುದಕ್ಕಾಗುತ್ತದೆ? ಅದರಲ್ಲಿ ಯಾವತ್ತೂ ನಾವು ಯಶಸ್ಸನ್ನು ಪಡೆಯುತ್ತೇವೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಖಾಸಗಿ ಪ್ರೌಢಶಾಲೆ ಸಂಹಿತೆ ನಿಯಮ 25 ಮತ್ತು ಪ್ರಾಥಮಿಕ ಶಾಲಾ ಅನುದಾನ ಸಂಹಿತೆ ನಿಯಮ 32 ಈ ಎರಡೂ ನಿಯಮಗಳ ಪ್ರಕಾರ ಅನುದಾನಿತ ಶಾಲೆಗಳಿಗೆ ಕಟ್ಟಡ ಕೊಡುವ ಒಂದು ಅವಕಾಶ ಹಿಂದೆ ಇತ್ತು. ಆದರೆ ಇತ್ತೀಚೆಗೆ ಅಂದರೆ ಸರ್ಕಾರಿ ಆದೇಶ ಡಿ-4 ಪಿಯುಡಿ 87ರಲ್ಲಿ ಈ ಕಟ್ಟಡಕ್ಕೆ ಅನುದಾನ ಕೊಡತಕ್ಕ ಪದ್ಧತಿಯನ್ನು ನಿಲ್ಲಿಸಿದ್ದೇವೆ. ಆದರ ಪ್ರಕಾರ ನಾವು ಖಾಸಗಿ ಶಾಲೆಗಳಿಗೆ ಕಟ್ಟಡಕ್ಕೆ ಅನುದಾನ ಕೊಡುತ್ತಿಲ್ಲ. ಆದರೆ ಮಾನ್ಯ ಸದಸ್ಯರು ಇದು ಸರಿಯಲ್ಲ ಎಂದು ಹೇಳಿದರು. ಇದುವರೆಗೆ ಅಂಥ ಪ್ರಸ್ತಾವನೆ ಬಂದಿರುವುದಿಲ್ಲವೆಂದು ಏನು ಹೇಳಿದ್ದಾರೆ, ಅದು ಸರಿಯಲ್ಲ, ಈಗಾಗಲೇ ಸಾಕಷ್ಟು ಸಲ ಇದರ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದೇನೆಂದು ಹೇಳಿದ್ದಾರೆ. ಈ ರೀತಿಯಾಗಿ ಸರಿಯಾದ ಮಾಹಿತಿ ಇಲ್ಲದೆ ಕೊಡುವುದು ಸರಿಯಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ರೀತಿ ಆಗದೆ ಇರುವ ಹಾಗೆ ನಾನು ನೋಡಿಕೊಳ್ಳುತ್ತೇನೆ.

ವನ್ಯ ಜೀವಿಗಳ ಸಂರಕ್ಷಣೆಗೆ ಕ್ರಮ

2 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿರುವ ಅಭಯ ಅರಣ್ಯಗಳೆಷ್ಟು ಹಾಗೂ ರಾಷ್ಟ್ರೀಯ ಉದ್ಯಾನವನಗಳೆಷ್ಟು?

ಆ) ವನ್ಯಮೃಗಗಳ ರಕ್ಷಣೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು) :

ಅ) ಕರ್ನಾಟಕದಲ್ಲಿ 5 ರಾಷ್ಟ್ರೀಯ ಉದ್ಯಾನವನಗಳು ಹಾಗೂ 19 ಅಭಯಾರಣ್ಯಗಳಿವೆ.

ಆ) ವನ್ಯಪ್ರಾಣಿ ಹಾಗೂ ಅವುಗಳ ಆವಾಸ ಸ್ಥಾನಗಳಿಗೆ ರಕ್ಷಣೆ ಒದಗಿಸಲು ಹಲವಾರು ಕೇಂದ್ರ ಹಾಗೂ ರಾಜ್ಯ ಪುರಸ್ಕೃತ ಯೋಜನೆಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ವನ್ಯಜೀವಿಗಳ ರಕ್ಷಣೆಗೆ ಇರುವ ಯೋಜನೆಗಳ ವಿವರಗಳು ಏನು ಎಂದು ಕೇಳಿದ್ದೇನೆ. ಆದರೆ ಸಂಪೂರ್ಣವಾದ ವಿವರಗಳು ಏನೇನು ಎಂದು ಸ್ಪಷ್ಟಪಡಿಸಿಲ್ಲ. ಕರ್ನಾಟಕ ರಾಜ್ಯದಲ್ಲಿರುವ ಹುಲಿಗಳ ಸಂಖ್ಯೆ ಎಷ್ಟು ಆನೆಗಳ ಸಂಖ್ಯೆ ಎಷ್ಟು ಎಂದು ನಾನು ಕೇಳುತ್ತಿದ್ದೇನೆ. ಏಕೆಂದರೆ ಎಷ್ಟೋ ಹುಲಿಗಳು ನಾಶವಾಗಿದೆ, ಹುಲಿಗಳ ಸಂತತಿ ನಾಶವಾಗುತ್ತಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಆದುದರಿಂದ ಈಗ ಇರತಕ್ಕ ಹುಲಿಗಳ ಸಂತತಿ ಎಷ್ಟು, ಆನೆಗಳ ಸಂತತಿ ಎಷ್ಟು? ಅದು ಜಾಸ್ತಿಯಾಗಿದೆಯೇ ಏನು ಎಂಬುದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅಭಯಾರಣ್ಯದಲ್ಲಿ ಗ್ರಾನೈಟ್ ತೆಗೆಯುವುದನ್ನು ಸ್ಪಷ್ಟವಾಗಿ ನಿಲ್ಲಿಸಿದ್ದೀರಾ? ಅದಕ್ಕೆ ಏನು ಆದೇಶ ಹೊರಡಿಸಿದ್ದೀರಿ? ನಾಗರಹೊಳೆ ಅಭಯಾರಣ್ಯಕ್ಕೆ ಬೆಂಕಿ ಬಿದ್ದಾಗ ಅದಕ್ಕೆ ಒಂದು ತನಿಖಾ ಆಯೋಗವನ್ನು ನೇಮಿಸಿದಿರಿ. ಆ ತನಿಖಾ ಆಯೋಗದ ವರದಿ ಬಂದಿದೆಯೇ? ಆ ವರದಿಯ ಪ್ರಕಾರ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ.ಪಿ. ಕೇಶವಮೂರ್ತಿ : ನಮ್ಮ ಕರ್ನಾಟಕ ರಾಜ್ಯದಲ್ಲಿ 5 ರಾಷ್ಟ್ರೀಯ ಉದ್ಯಾನವನಗಳು ಇವೆ; 19 ಅಭಯಾರಣ್ಯಗಳು ಇವೆ ಎಂಬ ಉತ್ತರವನ್ನು ಕೊಟ್ಟಿದ್ದೇನೆ. ಆದರೆ ಈಗ ಮಾನ್ಯ ಸದಸ್ಯರು ಕರ್ನಾಟಕ ರಾಜ್ಯದಲ್ಲಿ ಎಷ್ಟು ಹುಲಿಗಳು ಮತ್ತು ಆನೆಗಳು ಇವೆ ಎಂದು ಕೇಳಿದ್ದಾರೆ. ನಮ್ಮ 1993ರ ಸೆನ್ಸಸ್ ಪ್ರಕಾರ ಮೊದಲು 257 ಹುಲಿಗಳು ಇದ್ದವು, ಈಗ 305 ಆಗಿವೆ. ಪಾಂಥರ್ಸ್ ಎಂದು 383 ಇದ್ದವು, ಅವು ಈಗ 455 ಆಗಿವೆ. ಆನೆಗಳು 4418 ಇದ್ದವು, ಈಗ 5980 ಆಗಿವೆ. ಡಾರ್ ಎಂದು 5473 ಈಗ ಇವೆ. ನಾಗರಹೊಳೆಯಲ್ಲಿ ನಡೆದ ಘಟನೆ ಬಗ್ಗೆ ಸರಿಯಾದ ಪೂರ್ತಿ ವರದಿ ಇನ್ನೂ ನಮಗೆ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾಗರಹೊಳೆ ಅಭಯಾರಣ್ಯಕ್ಕೆ ಬೆಂಕಿ ಬಿದ್ದು ಎಷ್ಟು ವರ್ಷ ಆಯಿತು? ತನಿಖೆಗೆ ಯಾರನ್ನು ನೇಮಿಸಿದಿರಿ? ವರದಿ ಇನ್ನೂ ಬಂದಿಲ್ಲವೆಂದು ಅದಕ್ಕೆ ಕಾರಣ ಏನು?

ಶ್ರೀ ಎಂ.ಪಿ. ಕೇಶವಮೂರ್ತಿ : ಈ ಸಪ್ಲಿಮೆಂಟರಿ ಪ್ರಶ್ನೆ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಮತ್ತು ವರದಿಯನ್ನು ಕೊಡಿಸಿಕೊಡುತ್ತೇನೆ. ಅವರು ಏನು ಪ್ರಶ್ನೆ ಕೇಳಿದ್ದರು ಅದರ ಬಗ್ಗೆ ಮಾತ್ರ ಉತ್ತರ ರೆಡಿಯಾಗಿತ್ತು. ತಾವು ಆನೆಗಳ ಮತ್ತು ಹುಲಿಗಳ ವಿಷಯ ಕೇಳಿದಾಗ ಉತ್ತರ ಕೊಟ್ಟಿದ್ದೇನೆ. ವರದಿ ಬಗ್ಗೆ ನಾಳೆ ತಿಳಿಸುತ್ತಿದ್ದೇನೆ. ರಕ್ಷಣೆ ಬಗ್ಗೆ ಏನಾಗಿದೆ ಎಂದರೆ, ಈಗಾಗಲೇ ನಾವು ಅಭಯಾರಣ್ಯಗಳಲ್ಲಿ ಪ್ರಾಣಿಗಳನ್ನು ಕೊಲ್ಲತಕ್ಕದ್ದು, ಬೇಟೆಯಾಡತಕ್ಕದ್ದು ಏನಿದೆ ಅದನ್ನು ಕೂಡ ಸಂಪೂರ್ಣವಾಗಿ ನಿಲ್ಲಿಸಿದ್ದೇವೆ. ಆದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಹೆಚ್ಚಿನ ನಿಗಾ ಮಾಡುವುದಕ್ಕೆ ಅಧಿಕಾರಿಗಳಿಗೆ ವಾಹನ ಕೊಟ್ಟಿದ್ದೇವೆ ಮತ್ತು ರಕ್ಷಣಾ ಸಿಬ್ಬಂದಿ ಕೊಟ್ಟಿದ್ದೇವೆ ಹಾಗೂ ಬೇಕಾದ ಉಪಕರಣಗಳನ್ನು ಕೊಟ್ಟಿದ್ದೇವೆ, ವೈರ್ಲೆಸ್ ಸೆಟ್ ಕೊಟ್ಟಿದ್ದೇವೆ. ಏನಾದರೂ ಸುದ್ದಿ ಬಂದ ಕೂಡಲೇ ಅರಣ್ಯ ಇಲಾಖೆಯವರು ಹೋಗಿ ಕಾಪಾಡತಕ್ಕ ವ್ಯವಸ್ಥೆ ಆಗಿದೆ. ಇದುವರೆಗೆ ಯಾವ ರೀತಿಯಲ್ಲೂ ಅಂಥದ್ದು ಆಗಿಲ್ಲ. ಕಳೆದ ನವೆಂಬರ್ 19ನೇ ತಾರೀಖು ಶ್ರೀಮತಿ ನಾಗಮ್ಮಕೇಶವ ಮೂರ್ತಿಯವರ ಕ್ಷೇತ್ರದಲ್ಲಿ ಪ್ರಿಯದರ್ಶಿನಿ ಇಂದಿರಾಗಾಂಧಿಯವರ ಮೃಗಾಲಯವನ್ನು ಉದ್ಘಾಟನೆ ಮಾಡಿ ಅಭಿವೃದ್ಧಿ ಪಡಿಸಬೇಕೆಂಬ ಕಾರ್ಯಕ್ರಮವನ್ನು ನಡೆಸಿದ್ದೇವೆ. ಮಾನ್ಯ ಬೈರೇಗೌಡರು ಒಂದು ಕಾಗದವನ್ನು ಬರೆದಿದ್ದರು.

ಸಿಂಗಾಪುರದಲ್ಲ ಬರ್ಡ್ಸ್ ಪಾರ್ಕ್ ಇದೆ, ಅದೇ ರೀತಿ ಬನ್ನೇರುಘಟ್ಟ ನ್ಯಾಶನಲ್ ಪಾರ್ಕ್‌ನಲ್ಲಿ ಮಾಡಿದರೆ ಅನುಕೂಲವಾಗುತ್ತದೆಂದು ಹೇಳಿದ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ನಾನು ಹೋಗಿ ಅದನ್ನು ನೋಡಿಕೊಂಡು ಬಂದು ಅದನ್ನು ಅಭಿವೃದ್ಧಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂಬ ವಿಚಾರ ಸರ್ಕಾರದ ಗಮನದಲ್ಲಿದೆ.

ಶ್ರೀ ಸಿ. ಬೈರೇಗೌಡ: ನಾನು ಸಹ ಹೋಗಿ ನೋಡಿದ್ದೇನೆ. ಅದರ ಬಗ್ಗೆ ತಮ್ಮ ಅಧಿಕಾರಿಗಳು ಮಾಹಿತಿ ಕೂಡ ಕೊಟ್ಟಿರಬೇಕು. ಅದನ್ನು ಯಾವಾಗ ಮಾಡುತ್ತೀರಿ? ನಿಮ್ಮ ಅಧಿಕಾರಿಗಳು ಕೂಡ ಸಿಂಗಾಪುರಕ್ಕೆ ಹೋಗಿ ನೋಡಿದ್ದಾರೆ.

ಶ್ರೀ ಎಂ.ಪಿ. ಕೇಶವ ಮೂರ್ತಿ: 1994-95ರ ಬಡ್ಜೆಟ್ಟಿನಲ್ಲಿ ಈ ಬಗ್ಗೆ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರ ಜೊತೆಗೆ ಹೇಳುವುದಾದರೆ, ಪ್ರಾಣಿಗಳು ಇರತಕ್ಕ ಎಲ್ಲ ಸ್ಥಳಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೇವೆ. ಆ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಹಣದಿಂದ ಹೆಚ್ಚಿನ ರೀತಿಯಲ್ಲಿ ಅನುಕೂಲ ಮಾಡಿಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಇದುವರೆಗೆ ಯಾವುದೇ ತೊಂದರೆ ಆಗಿಲ್ಲ, ನಾಗರಹೊಳೆ ಬಗ್ಗೆ ಏನು ಮಾಹಿತಿ ಕೇಳಿದ್ದಾರೆ ಅದಕ್ಕೆ ಸಂಬಂಧಪಟ್ಟ ವರದಿಯನ್ನು ನಾಳೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಾಗರಹೊಳೆ ಬಗ್ಗೆ ಏತಕ್ಕೆ ಕೇಳುತ್ತಿದ್ದೇನೆಂದರೆ ಅಲ್ಲಿ ಬೆಂಕಿ ಬಿದ್ದಾಗ ನಾನು ಹೋಗಿ ಸ್ಥಳ ಪರಿಶೀಲನೆ ಮಾಡಿ ಬಂದೆ. 2-3 ವರ್ಷಗಳ ಮೊದಲು ಈ ಘಟನೆ ನಡೆದಿದೆ. ಇವತ್ತಿನವರೆಗೆ ಅದರ ಬಗ್ಗೆ ಗಮನ ಇಲ್ಲವೆಂದು ಹೇಳುವುದಾದರೆ, ನಾಳೆ ವರದಿ ಕೊಡುತ್ತೇನೆಂದು ಹೇಳುವುದಾದರೆ ಏನು ಅರ್ಥ? ಅಲ್ಲಿ ನಡೆದಿರತಕ್ಕ ಚಿತ್ರ ಏನೆಂದಾದರೂ ತಮಗೆ ಗೊತ್ತಿರಬೇಕು. ಇದುವರೆಗೆ ಅಲ್ಲಿ ಏನಾಗಿದೆ? ಸರ್ಕಾರಕ್ಕೆ ಬಂದಿರತಕ್ಕ ವರದಿ ಎನು ಎಂಬುದನ್ನು ಹೇಳಬೇಕು. ಇನ್ನೊಂದು ವಿಚಾರ, ನಾನು ಇದನ್ನು ಹಾಸ್ಯಕ್ಕಾಗಿ ಹೇಳುತ್ತಿಲ್ಲ, ಖಾಸಗಿಯವರು ಹುಲಿ ಮತ್ತು ಚಿರತೆಗಳನ್ನು ಸಾಕಬೇಕೆಂದು ಕೇಳಿದರೆ ನೀವು ಕೊಡುತ್ತೀರಾ? ಸರ್ಕಾರದವರು ಕೊಡುವುದಾದರೆ ನಾವು ಸಾಕುತ್ತೇವೆಂದು ಕೆಲವರು ಹೇಳಿದ್ದಾರೆ. ನಾಗರಹೊಳೆ ಘಟನೆ ಬಗ್ಗೆ ತಾವು ಸ್ಪಷ್ಟಪಡಿಸಬೇಕು. ಸ್ಪಷ್ಟಪಡಿಸಲಿಲ್ಲವೆಂದರೆ ನಿಜವಾಗಿ ಹೇಳುತ್ತೇನೆ, ನಿಮ್ಮ ಇಲಾಖೆಗೆ ಜವಾಬ್ದಾರಿ ಇಲ್ಲವೆಂದು; ನಿಮ್ಮ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ನಾಗರಹೊಳೆಯಲ್ಲಿ ಬೆಂಕಿ ಬಿದ್ದು ಇಷ್ಟೆಲ್ಲಾ ಆದರೂ ವರದಿ ಬಂದಿಲ್ಲವೆಂದು ಹೇಳುವುದಾದರೆ ನಾನು ಅದನ್ನು ಒಪ್ಪುವುದಿಲ್ಲ.

ಶ್ರೀ ಎಂ.ಪಿ. ಕೇಶವಮೂರ್ತಿ: ನಡೆದಂತಹ ಘಟನೆ ನನಗೆ ಗೊತ್ತಿದೆ. ಆದರೆ ನಾನು ವೈಯಕ್ತಿಕವಾಗಿ ಹೇಳುವುದಾದರೆ ವರದಿಯನ್ನು ತಾವು ಕೇಳಿರುವುದರಿಂದ ನಾಳೆ ಆ ವರದಿ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಾಗರಹೊಳೆ ಘಟನೆ ನಡೆದು ಮೂರು ವರ್ಷಗಳಾಗಿವೆ. ಆ ವರದಿಯನ್ನು ತಾವು ನೋಡಿದ್ದೀರಾ? ನನಗೆ ಸಂಪೂರ್ಣ ವರದಿ ಬೇಡ. ಆ ವರದಿಯಲ್ಲಿ ಹೇಳಿರುವಂತೆ ಏನು ನಡೆದಿದೆಯೆಂದು ಹೇಳಬೇಕು. ನಾಗರಹೊಳೆ ಘಟನೆಯ ವರದಿ ಇವರ ಕೈ ಸೇರಿಲ್ಲ ; ಒಪ್ಪಿಕೊಳ್ಳೋಣ. ಅಲ್ಲಿನ ಪರಿಸ್ಥಿತಿ ಏನು, ಅಲ್ಲಿ ಏನಾಗಿದೆ ಎನ್ನುವ ವಿಷಯ ತಮಗೆ ಗೊತ್ತಿಲ್ಲವೇ?

ಶ್ರೀ ಎಂ.ಪಿ. ಕೇಶವಮೂರ್ತಿ: ನನಗೆ ವಿಷಯ ಗೊತ್ತಿದೆ. ಗೊತ್ತಿರತಕ್ಕ ವಿಷಯ ಹೇಳಿದರೆ ಮತ್ತೆ ನಾಳೆ ಬೆಳಿಗ್ಗೆ ತಾವು ನಿಯಮ 334, ಮತ್ತೆ ಯಾವುದಾದರೂ ನಿಯಮದ ಪ್ರಕಾರ ಪ್ರತ್ಯೇಕವಾಗಿ ಕೇಳಿದರೆ ವರದಿಯನ್ನು ಕೊಡುತ್ತೇನೆ. ತಾವು ಬೇಕಾದರೆ ಕೇಳಿ. ಖಾಸಗಿಯವರಿಗೆ ಹುಲಿ ಮತ್ತು ಆನೆ ಕೊಡುತ್ತೀರಾ ಎಂದು ಕೇಳಿದರು. ಆನೆಗಳನ್ನು ಸರ್ಕಾರ ನಿಗದಿ ಮಾಡಿರುವ ರೇಟಿನ ಪ್ರಕಾರ ಕೊಡುತ್ತಿದ್ದೇವೆ.

ಹುಲಿಯನ್ನು ಇದುವರೆಗೆ ಯಾರೂ ಕೇಳಿಲ್ಲ. ಆ ವಿಚಾರ ಬಂದಾಗ ಅದನ್ನು ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಹುಲಿಯನ್ನು ಕೇಳಿದರೆ ಪರಿಶೀಲನೆ ಮಾಡುತ್ತೀರಾ?

ಶ್ರೀ ಎಂ.ಪಿ. ಕೇಶವಮೂರ್ತಿ : ಪರಿಶೀಲನೆ ಮಾಡಿ ಕೊಡುವುದಕ್ಕೆ ಸಾಧ್ಯವೆ ಇಲ್ಲವೆ ಎಂಬುದನ್ನು ನೋಡಿ ಕೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಡಿ.ಬಿ. ಚಂದ್ರೇಗೌಡರ ಪ್ರಶ್ನೆಯನ್ನು ಕಂದಾಯ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಇಲ್ಲಿಗೆ ಪ್ರಶ್ನೋತ್ತರಗಳ ಅವಧಿ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ 2ನೇ ಪಟ್ಟಿಯಲ್ಲಿರುವ 20 ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ 36ನ್ನು ಹೊರತುಪಡಿಸಿ ಇನ್ನುಳಿದ 19 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೈಲಹೊಂಗಲ ತಾಲ್ಲೂಕಿನ ಮಾಟೋಳ್ಳಿ ಗ್ರಾಮದಲ್ಲಿ ಮೀನುಗಾರರಿಗೆ ನಿವೇಶನ

122 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ); ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕೆಂಗಾನೂರು ಹಾಗೂ ಸೌದತ್ತಿ ತಾಲ್ಲೂಕಿನ ಮಾಟೋಳ್ಳಿ ಗ್ರಾಮಗಳಲ್ಲಿ ಮೀನುಗಾರರಿಗೆ ಮನೆಗಳನ್ನು ಕಟ್ಟಿಕೊಡಲಾಗುವುದೆಂದು ಆಶ್ವಾಸನೆ ನೀಡಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *ಆ ಆಶ್ವಾಸನೆ ಪ್ರಕಾರ, ಸರ್ಕಾರದವರು ಅಲ್ಲಿ ಮೀನುಗಾರರಿಗೆ ಮನೆಗಳನ್ನು ಕಟ್ಟಲು ಯಾವ ಕ್ರಮ ಕೈಗೊಂಡಿರುವವರು; ಹಾಗೂ ಈಗ ಮನೆಗಳನ್ನು ಕಟ್ಟುವ ಕೆಲಸ ಯಾವ ಹಂತದಲ್ಲಿರುವುದು;*

ಇ) *ಮೀನುಗಾರರಿಗೆ ತಮ್ಮ ಸೊಸೈಟಿ ಮುಖಾಂತರ ಮನೆಗಳನ್ನು ಕಟ್ಟಲು ಪುಕ್ಕಟೆಯಾಗಿ ಸ್ಥಳವನ್ನು ಒದಗಿಸಿದ ಸಂಗತಿ ನಿಜವೇ;*

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು.

ಬೆಂಗಳೂರು ನಗರದಲ್ಲಿ ವಿದ್ಯಾ ಭವನವನ್ನು ನಿರ್ಮಿಸುವುದರ ಬಗ್ಗೆ

119 - ಶ್ರೀ ಆರ್.ವಿ. ದೇವರಾಜ್ (ಚಾಮರಾಜಪೇಟೆ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?